






ಜೀವನಶೈಲಿಯನ್ನು ಸುಧಾರಿಸಬೇಕು ಎಂಬ ಆಸ್ಥೆಯಿಂದ ಸರ್ಕಾರದ ಮೊರೆಹೋದ ಸ್ಲಮೆಟ್ ಅವರಿಗೆ ಸಕಾರಾತ್ಮಕ ಸ್ಪಂದನೆ ಸಿಕ್ಕಿತು. ಸ್ಥಳೀಯ ನಿವಾಸಿಗಳು ಹಾಗೂ ಸರ್ಕಾರದ ನೆರವಿನಿಂದ ಇಡೀ ಹಳ್ಳಿ ಕಲರ್‌ಫುಲ್ ಆಗಿ ರೂಪುಗೊಂಡಿತು. ಅಲ್ಲಿನ ನಿವಾಸಿಗಳೂ ಅತಿ ಉತ್ಸುಕತೆಯಿಂದ ಈ ಕಾರ್ಯದಲ್ಲಿ ತೊಡಗಿಕೊಂಡರು. ಮನೆಯ ಸ್ವಚ್ಛತೆಯಿಂದ ಹಿಡಿದು ಬಣ್ಣ ಬಳಿಯುವವರೆಗೂ ಎಲ್ಲಕ್ಕೂ ಕೈಜೋಡಿಸಿದರು.

ಇಂತಿಪ್ಪ ಕಾರ್ಯದಿಂದಾಗಿ ಹಳ್ಳಿಯ ಜನಜೀವನ ಬಹಳಷ್ಟು ಸುಧಾರಿಸಿದೆ. ಹೊರಗಿನ ಜನ ಕಾಲಿಡಲೂ ಇಚ್ಛಿಸದ ನೆಲದಲ್ಲಿ ಈಗ ಪ್ರವಾಸಿಗರ ದಂಡೇ ಇತ್ತ ಮುಖ ಮಾಡುತ್ತಿದೆ. ಅಲ್ಲದೇ ವಿದೇಶಿಗರೂ ಈ ಹಳ್ಳಿಗೆ ಭೇಟಿಕೊಡದೆ ಇರರು. ಇದರಿಂದ ಪ್ರವಾಸೋದ್ಯಮ ಉನ್ನತಿಗೂ ರಹದಾರಿಯಾಗಿದೆ.

ಸರ್ಕಾರವೂ ಇಲ್ಲಿನ ನಿವಾಸಿಗಳಲ್ಲಿ ಶಿಕ್ಷಣದ ಮಹತ್ವ, ಸ್ವಚ್ಛತೆಯ ಅರಿವು ಮೂಡಿಸಿದೆ. ಪರಿಣಾಮ ಕೊಳೆಗೇರಿಗಳಲ್ಲೇ ಕಮರುತ್ತಿದ್ದ ಮಕ್ಕಳ ಬಾಲ್ಯ ಈಗ ಶಾಲೆಯಲ್ಲಿ ಅರಳುವಂತಾಗಿದೆ.

ಸಾಮಾನ್ಯವಾಗಿ ಕೊಳೆಗೇರಿಗಳಲ್ಲಿ ಕಾಡುವ ಪ್ರಮುಖ ಸಮಸ್ಯೆ ಬಡತನ, ನಿರುದ್ಯೋಗ. ರೈನ್‌ಬೊ ಬಣ್ಣಗಳು ಅಲ್ಲಿನ ಜನರ ಬದುಕನ್ನೂ ಬಣ್ಣವಾಗಿಸಿವೆ. ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿರುವುದರಿಂದ ನಿವಾಸಿಗಳಿಗೆ ಸ್ವಂತ ಸ್ಥಳದಲ್ಲೇ ಉದ್ಯೋಗ ಅವಕಾಶಗಳೂ ಹೆಚ್ಚಾಗುತ್ತಿವೆ. ವಿವಿಧ ದೇಸೀ ಉತ್ಪನ್ನಗಳ ಅಂಗಡಿ, ಚಿಕ್ಕ ಪುಟ್ಟ ಹೋಟೆಲ್, ಉಪಾಹಾರ ಕೇಂದ್ರಗಳು ಇಲ್ಲಿ ತಲೆ ಎತ್ತುತ್ತಿವೆ. ನಿವಾಸಿಗಳ ಕ್ರಿಯಾಶೀಲ ಬದುಕಿಗೆ ಉತ್ತೇಜನವೂ ಸಿಕ್ಕಿದೆ.

ಇಂಡೊನೇಷ್ಯಾಕ್ಕೆ ಭೇಟಿ ಕೊಟ್ಟ ಪ್ರತಿ ಪ್ರವಾಸಿಗನಿಗೂ ಈ ಹಳ್ಳಿ ಈಗ ಆಕರ್ಷಣೀಯ ಕೇಂದ್ರವಾಗಿದೆ. ಪ್ರತಿಯೊಬ್ಬರೂ ಇಲ್ಲಿಗೆ ಪಾದ ಬೆಳೆಸಿ ಹಳ್ಳಿಯ ಸೊಬಗನ್ನು ಕಣ್ತುಂಬಿಕೊಂಡು ಸೆಲ್ಫಿ ಕ್ಲಿಕ್ಕಿಸಿಕೊಳ್ಳುತ್ತಾರೆ. ಇದರಿಂದ ಸ್ಥಳೀಯ ಆರ್ಥಿಕತೆಯೂ ವೃದ್ಧಿಯಾಗಿದೆ. ಇದೆಲ್ಲವೂ ಆಗಿದ್ದು 2 ವರ್ಷಗಳಿಂದೀಚೆಗೆ.

ಇದೇ ರೀತಿ ಜೋಡಿಪಾನ್ ಎಂಬ ಹಳ್ಳಿಯನ್ನು 'ಕಲರ್‌ಫುಲ್' ಮಾಡಲಾಗಿದೆ. ನದಿಯ ದಡದಲ್ಲಿರುವ ಜೋಡಿಪಾನ್ ಹಳ್ಳಿ ನಿರಂತರ ಕೊಳಕನ್ನೇ ಸೂಸುವ ಕೊಳೆಗೇರಿ ಎಂಬ ಹಣಪಟ್ಟಿ ಕಟ್ಟಿಕೊಂಡಿತ್ತು. ಇದರಿಂದ ನದಿಯೂ ಕಲುಷಿತಗೊಂಡಿತ್ತು. ಸರ್ಕಾರ ಅಲ್ಲಿನ ನಿವಾಸಿಗಳನ್ನು ಒಕ್ಕಲೆಬ್ಬಿಸಿ ಬೇರೆಡೆ ವಸತಿ ಕಲ್ಪಿಸಲು ನಿರ್ಧರಿಸಿತ್ತು. ಇದಕ್ಕೆ ಅವಕಾಶ ನೀಡದ ಮಲಂಗ್‌ನ ಮಹಮ್ಮದೀಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಳ್ಳಿಯನ್ನು ಕಲರ್‌ಫುಲ್ ಮಾಡಲು ಅಡಿಯಿಟ್ಟರು. ಸ್ಥಳೀಯ ಕಲಾವಿದರ, ನಿವಾಸಿಗಳ ನೆರವು ಪಡೆದು ಇಡೀ ಹಳ್ಳಿಯ ಚಿತ್ರಣವನ್ನೇ ಚಿತ್ರವಾಗಿಸಿದರು.

ಇಲ್ಲಿ ಎರಡು ಹಳ್ಳಿಗಳ ಮಧ್ಯಭಾಗದಲ್ಲಿ ಸೇತುವೆಯೊಂದು ಹಾದುಹೋಗಿದ್ದು, ಒಂದು ಹಳ್ಳಿಯ ಮನೆಗಳನ್ನು ರೈನ್‌ಬೊ ಬಣ್ಣಗಳಿಂದಲೂ, ಇನ್ನೊಂದು ಹಳ್ಳಿಯ ಮನೆಗಳನ್ನು ನೀಲಿ ಬಣ್ಣದಿಂದಲೂ ಅಲಂಕರಿಸಲಾಗಿದೆ. ಸೇತುವೆ ಮೇಲ್ಭಾಗದಲ್ಲಿ ನಿಂತು ಎರಡೂ ಹಳ್ಳಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬ. ಈ ಹಳ್ಳಿಗಳು ಈಗ ಪ್ರವಾಸಿಗರ ಅಚ್ಚುಮೆಚ್ಚಿನ ತಾಣಗಳಾಗುತ್ತಿವೆ.

ಈ 'ಕಲರ್‌ಫುಲ್' ಹಳ್ಳಿಗಳಿಂದ ಸ್ಫೂರ್ತಿ ಪಡೆದಿರುವ ಅಲ್ಲಿನ ಸರ್ಕಾರ ಇನ್ನಷ್ಟು ಹಳ್ಳಿಗಳನ್ನು 'ಬಣ್ಣಮಯ'ವಾಗಿಸಲು ನಿರ್ಧರಿಸಿದೆಯಂತೆ. ಇಂಡೊನೇಷ್ಯಾದ ಈ 'ಕಲರ್‌ಫುಲ್' ಹಳ್ಳಿಗಳು ಸಾಮಾಜಿಕ ಜಾಲತಾಣಗಳಲ್ಲೂ ಟ್ರೆಂಡ್ ಆಗಿವೆ. ವಿಶ್ವದ ಕೊಳೆಗೇರಿಗಳಿಗೆಲ್ಲ ಈ ಹಳ್ಳಿಗಳು ಮಾದರಿಯಾಗಿ ನಿಂತಿವೆ.